**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.2232/2021**

| | | |
|---|---|---|
| ಹೆಸರು | ಲೋಹಿತ್ | DW -1 |
| ತಂದೆಯ ಹೆಸರು | ಬಸವರಾಜಪ್ಪ | |
| ವಯಸ್ಸು | 39 ವರ್ಷ | |
| ಉದ್ಯೋಗ | ಖಾಸಗಿ ಉದ್ಯೋಗ | ದಿನಾಂಕಃ 21.06.2025 |
| ವಾಸ | ಬೆಂಗಳೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

ಪಿರ್ಯಾದಿಯು ನನಗೆ ಅತ್ತೆ ಮಗಳು, ದಿನಾಂಕ 09.10.2018 ರಂದು ನಾನು ಪಿರ್ಯಾದಿಯಿಂದ ರೂ.20,000/- ನಗದು ಹಣವನ್ನು ಶೇ. 10 ರ ಬಡ್ಡಿಯಂತೆ ಪಡೆದುಕೊಂಡಿದ್ದು, ಸದರಿ ಹಣವನ್ನು ನಾನು ಒಂದು ವರ್ಷದ ಒಳಗೆ ಮರುಪಾವತಿ ಮಾಡುತ್ತೇನೆ ಎಂದು ಹೇಳಿ ಪತ್ರವನ್ನು ಮತ್ತು ಒಂದು ಚೆಕ್ ನ್ನು ಕೊಟ್ಟಿದ್ದು, ಸದರಿ ಪತ್ರದಲ್ಲಿ ಶೇ 2 ರಂತೆ ಬಡ್ಡಿ ಎಂದು ಬರೆದು ಕೊಟ್ಟಿದ್ದೆ. ನಂತರ ನಾನು ಸದರಿ ರೂ.20,000/- ಹಣವನ್ನು ಬಡ್ಡಿ ಸಮೇತ ಆರು ತಿಂಗಳ ನಂತರ ರೂ. 30,000/- ಹಣವನ್ನು ಪಿರ್ಯಾದುದಾರರಿಗೆ ನೀಡಿದ್ದು, ಬಾಕಿ ರೂ.2,000/- ಹಣವನ್ನು ಕೊಡುತ್ತೇನೆ ಎಂದು ಹೇಳಿದ್ದೆ. ಸದರಿ ಕಾಲಕ್ಕೆ ನಾನು ಬರೆದುಕೊಟ್ಟಿದ್ದ ಪತ್ರವನ್ನು ಪಿರ್ಯಾದಿಯು ನನಗೆ ಪಾಪಸ್ಸು ಕೊಟ್ಟಿದ್ದು, ಚೆಕ್ ನ್ನು ನಂತರ ಕೊಡುತ್ತೇನೆ ಎಂದು ಹೇಳಿದ್ದರು. ಆ ಕಾಲಕ್ಕೆ ನನ್ನ ಮತ್ತು ಪಿರ್ಯಾದುದಾರರ ಜೊತೆ ನನ್ನ ಹೆಂಡತಿ ಮತ್ತು ನನ್ನ ತಂಗಿ ಇದ್ದರು.

ನಂತರ ಪಿರ್ಯಾದಿದಾರರು ಸದರಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ಧ ಪ್ರಸ್ತುತ ಪ್ರಕರಣವನ್ನು ರೂ. 10,00,000/-ಹಣಕ್ಕೆ ಸಲ್ಲಿಸಿರುತ್ತಾರೆ. ನಾನು ಪಿರ್ಯಾದಿಯಿಂದ ರೂ. 10.00/- ಲಕ್ಷ ಹಣವನ್ನು ಪಡೆದಿಲ್ಲ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮಎಫ್ ಸಿ ನ್ಯಾಯಾಲಯ,ಹರಿಹರ.